ಸಮ್ಮತಿಸುತ್ತಿದ್ದ ಮಕ್ಕಳೂ ಅವಳನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಹಿರಿಯರು ಆ ಮಕ್ಕಳಿಗೆ ಆ ಪಾಪು ಬಗ್ಗೆ ಏನೇನು ಊದಿ ಹೇಳುತ್ತಿದ್ದರೊ ಏನೊ, ಜೊತೆಗೆ ಪಾಪುನ ಹೊಂದಾಣಿಕೆ ಸ್ವಭಾವವೂ ಏರುಪೇರಾಗಿ ಬಿಟ್ಟು ಅವಳು ಬಂದಿತೆಂದರೆ ಮಕ್ಕಳೂ ದೂರ ಹೋಗಿ ಬಿಡುತ್ತಿದ್ದರು.

ಪಾಪು ಸಿಟ್ಟಿನಿಂದ ಕಿರುಚುತ್ತಿದ್ದಳು. ಗಂಗೆ ಅವಳ ನೆರವಿಗೆ ಬಂದು ಮುದ್ದು ಗರೆದು ಲಂಚವಾಗಿ ಯಾವುದರೊಂದು ಅಂಗಡಿ ತಿನಿಸನ್ನೊ, ಪೆಪ್ಪರ್‌ ಮಿಂಟನ್ನೊ ಕೊಟ್ಟು ರಮಿಸುತ್ತಿದ್ದಳು.

ಪ್ರೀತಿಯಲ್ಲಿ ಅರಳಬೇಕಾಗಿದ್ದ ಮಗು ವಿಷದ ವಾತಾವರಣದಲ್ಲಿ ಅರಳಿ ಕೊಳ್ಳಲಾರದೆ ಹುಳು ಕಚ್ಚಿದ ಹೂವಿನಂತೆ ಸುರುಟಿ ಹೋಗ ತೊಡಗಿದಳು.

ತಾಯಿ, ಮಗಳು ಇಬ್ಬರೂ ಒಟ್ಟಿನಲ್ಲಿ ಸಮಾಜದಲ್ಲಿ ಒಂದಾಗಿ ಬೆರೆತು ಕೊಳ್ಳಲಾಗದೆ ಸೀಮಿತ ಗಡಿ ಒಳಗೇ ಬಾಳು ಕಳೆಯುತ್ತಿದ್ದರು. ಇಬ್ಬರಿಗೂ ನಿಶ್ಚಿಂತೆ ಕೊಡುವ ಸ್ಥಳವೆಂದರೆ ಅವರ ವಾಸಸ್ಥಾನ. ಆ ಮುರುಕಲು ಗಾಡಿ ಖಾನೆಲಿ ಮಗುವಿಗೆ ಹಳೇ ತುಂಡು ಬಟ್ಟೆಗಳಲ್ಲಿ ಗೊಂಬೆ, ಗಿಣಿ, ಹೂವುಗಳನ್ನು ಮಾಡಿ ಆಟವಾಡಲು ನೀಡುವಳು. ಪಾಪು ಈ ಆಟಿಕೆಗಳನ್ನಿಟ್ಟುಕೊಂಡು ಆಡುತ್ತಲೊ, ಮಲಗುತ್ತಲೊ ಇರುವಾಗ ಗಂಗೆ ಕಸೂತಿ ಕೆಲಸದಲ್ಲಿ ತನ್ಮಯಳಾಗಿ ಬಿಡುವಳು. ಪಾಪು ಬೊಂಬೆಗಳ ಜೊತೆ ಮುದ್ದಾಗಿ ಮುದ್ದು ಮಾಡುತ್ತಾ ಆಡಿಕೊಳ್ಳುವ ಬದಲಾಗಿ, ಬೊಂಬೆಗಳನ್ನು ತಿರುಚಿ, ಕಚ್ಚಿ ಬಿಸಾಕಿ ಬಿಡುತ್ತಿದ್ದಳು. ಇದನ್ನು ಗಂಗಾ ಗಮನಿಸಿ ಚಿಂತೆಗೊಳಗಾಗುತ್ತಿದ್ದಳು.

ಕೆಲವು ಕಾಲದ ನಂತರ ಪಾಪೂನಲ್ಲಿ ಒಂದು ವಿಶೇಷತೆ ಕಾಣಸಿಕ್ಕಿತು. ಹಂಚಿ ಪೊರಕೆ ಕಡ್ಡಿಗಳನ್ನು ತಂದು, ಮುರಿದು ತನ್ಮಯತೆಯಿಂದ ಜೋಡಿಸುತ್ತಿದ್ದಳು. ಅವಳಿಗೆ ಲೆಕ್ಕ ತಿಳಿಯದಿದ್ದರೂ ಅದನ್ನು ಜೋಡಿಸುವಾಗ ಎರಡು, ಮೂರು, ನಾಲ್ಕು ಹೀಗೆ ಕಡ್ಡಿಗಳ ಕಟ್ಟುಗಳನ್ನು ತನ್ಮಯತೆಯಿಂದ ಮಾಡತೊಡಗಿದಳು. ಗೊಂಬೆಯಾಟ ಒಲ್ಲದ ಆ ಪುಟ್ಟ ಹುಡುಗಿ ಲೆಖ್ಖದತ್ತ ಒಲವು ತೋರುತ್ತಿ ರುವುದು ಕಂಡು ಗಂಗೆಗೆ ವಿಸ್ಮಯ. ಗಂಗೆ ತಾನೂ ಈ ಲೆಖ್ಖದಾಟದಲ್ಲಿ ಸೇರಿಕೊಂಡು. ಪಾಪು ಜೋಡಿಸುತ್ತ ಕಡ್ಡಿಗಳ ಸಂಖ್ಯೆ ಗಂಗೆ ತೋರಿಸುವಳು. ಒಂದು ಕಡ್ಡಿ, ಎರಡು ಕಡ್ಡಿ, ಮೂರು ಕಡ್ಡಿಗಳು ಎಂದು ಅಂಕಿಗಳನ್ನು ಬಾಯಿ ಪಾಠ ಮಾಡಲಾರಂಭಿಸಿದಳು. ಗಂಗೆ ಎಲ್ಲಿವರೆಗೆ ಎಣಿಸುವಳೊ ಅಲ್ಲೀವರೆಗೆ ಪಾಪು. ಅಂಕಿಗಳನ್ನು ಅರಿತು ಕಡ್ಡಿಗಳನ್ನು ಸಂಖ್ಯೆಗೆ ತಕ್ಕಂತೆ ಜೋಡಿಸಿ ಬಾಯಲ್ಲಿ ಎಷ್ಟು ಕಡ್ಡಿಗಳಿವೆ ಎಂದು ಹೇಳುವಳು ನಿರಕ್ಷರಳಾದ ಗಂಗೆ ಅವಳಿಗೇ ಅರಿಯದಂತೆ ಪಾಪೂಗೆ ಗಣಿತದಲ್ಲಿ ಆಸಕ್ತಿ ಮೂಡಿಸುತ್ತಿದ್ದಳು. ಕೂಡುವುದು, ಕಳೆಯುವುದು, ಗುಣಾಕಾರ, ಭಾಗಾಕಾರ ಎಲ್ಲದರ ತಳಪಾಠ ಪಾಪುಗೆ ಆಟದ ವೇಳೆ ಅಮ್ಮನಿಂದ ದೊರಕಿತು. ಅವಳ ಈ ಆಟಕ್ಕೆ ಕಡ್ಡಿ, ಕಲ್ಲು, ಬೀದಿಯಲ್ಲಿ ಹೋಗುವ ವಾಹನಗಳು, ಫುಟ್‌ಪಾತಿನ ಕುರಿ ಹಿಂಡುಗಳು, ಕೊನೆಗೆ ಇರುವೆ ಸಾಲು ಬೇಕಾಗುತ್ತಿತ್ತು!

ಗಂಗೆಗೆ ಅವಳನ್ನು ಶಾಲೆಗೆ ಸೇರಿಸಬೇಕೆಂಬ ಹಂಬಲ ಪ್ರಾರಂಭವಾಯಿತು.

'ದ್ಯಾವ್ರೇ... ನಿನ್ನ ಈ ಕೂಸಿಗೆ ಒಂದು ಒಳ್ಳೆಯ ಬಾಳು ತೋರಿಸೊ... ಅಪ್ಪಾ...' ಎಂದು ಕಾಣದ ದೇವರಲ್ಲಿ ಕರುಣೆ ಬೇಡುತ್ತಿದ್ದಳು.

ಒಂದು ದಿನ ಗಂಗೆ ಎಂದಿನಂತೆ ಕಸೂತಿ ಕಾಯಕದಲ್ಲಿ ತೊಡಗಿದ್ದಾಗ ಪಾಪು, ತುಂಬೆ ಹೂವು, ಪುಲ್ಲಂಪಚ್ಚಿ, ಹುಲ್ಲು ಎಲ್ಲಾ ಕಿತ್ತು ಲಂಗದಲ್ಲಿ ತುಂಬಿಕೊಂಡು ಬಂದಳು.

'ಇದನ್ನೆಲ್ಲಾ ಯಾಕವ್ವಾ ತಂದೀ...?'

'ಪೂಜೆ ಮಾಡಾಕ...' ಎಂದು ಎಲ್ಲವನ್ನೂ ಕುಳಿತಿದ್ದ ಗಂಗೆ ಮೇಲೆ ಸುರಿದುಬಿಟ್ಟಳು.

'ಅಯ್...! ನಾನು ದೇವ್ರು ಅದೀನೇನು...? ಹುಚ್ಚು ಖೋಡಿ ಪೋರಿ...!'

**ಕಸಿವಿಸಿ**

ಹೊರಗೆ ಪೂರ್ಣ ಚಂದಿರನಲ್ಲಿ
ಕಲೆಗಳ ಕಂಡು 'ಮುಸಿ ಮುಸಿ'
ನಕ್ಕ ಯುವತಿ
ಒಳಗೆ ಕನ್ನಡಿಯಲ್ಲಿ
ತನ್ನ ಮೊಡವೆ ಕಲೆಗಳ ಕಂಡು
'ಕಸಿವಿಸಿ'ಗೊಂಡಳು!

★ ಗಣೇಶ್ ಪ್ರಸಾದ್ ಬಿ.ವಿ.




ಅವಳು ಮಗುವನ್ನು ಕಟ್ಟಿಕೊಂಡು ಮುತ್ತಿಕ್ಕಿದಾಗ ಆ ಪುಟ್ಟ ಹುಡಗಿ 'ಹೌದು...' ಎಂದಿತು!

'ನಾನು ದೇವ್ರು ಹೇಂಗಾದ್ನವ್ವಾ...! ನಾ ನಿನ್ನ ಅವ್ವ ಅಲ್ಲೇನ...?'

'ನನ್ನ ಅವ್ವ ನೀ ಅದೀ... ನನ್ನಪ್ಪ ದೇವ್ರು ಅಲ್ಲೇನಾ...? ಹಂಗಾರ ನೀನು ದೇವ್ರಾ ಅದೀ...'

'ನಿನ್ನ ಕಂಡಿ ದೇವ್ರಾ ಅದಾನ ಖರೇ... ಅಂವ ದೇವಸ್ಥಾನದಲ್ಲೇ ಇರ್‍ತಾನ.

'ಮನೀಗೆ ಬರಲ್ಲ ಯಾಕಾ...? ದೇವಸ್ಥಾನದಾಗ ನಾ ಅವ್ನ ಕಂಡೇ ಇಲ್ಲ...'

'ಅಂವ ಕಲ್ಲಾಗಿದಾನ... ಅದಕ್ಕೇ ಮನೀಗೆ ಬರಾಹಂಗಿಲ್ಲ...'

'ಪಾಪೂನ ನೋಡಾಕ ಕಾಣ್ಸೆಕೊಳ್ಳೋದಿಲ್ಲೇನಾ...? ಅದೆಂತ ಅಪ್ಪ ಅದಾನ...'

'ಅಂವ ಬಹಳ ಒಳ್ಳೆ ಅಪ್ಪ... ಕಾಣಸ್ಕಳ್ದಿದ್ರೂ ಕಾಪಾಡ್‌ತಾನ...'

'ನಾನು ಪಾಪೂ... ಅವ್ನ ಕೂಸು ಅಂತ ತಿಳ್ದಾನೇನು...?'

'ನೀನು ಪಾಪೂ ಅಲ್ಲ ನನ್ನ ಬಂಗಾರ...' ಎಂದು ನಗುತ್ತಾ ಗಂಗೆ ಹೇಳಿದಳು.' ಅದು ಮುದ್ದಿಗೆ ಕರೆಯೋದಷ್ಟೆ... ಶಾಲೆಗೆ ದಾಖಲಾತಿ ಪಡೊಮುಂದ ನಿಂಗೆ ಒಂದು ಒಳ್ಳೆ ಛಲೊ ಹೆಸ್ರು ಆರಿಸ್ಬೇಕು...'

'ಯಾಕಾ...? 'ಪಾಪೂ'ನೇ ಛಂದ ಅದ...!'

'ಅದಕ್ಕಿಂತಾ ಛಂದದ ಹೆಸ್ರು ಇಡೋಣು... ನಿಂಗೆ ಯಾವ ಹೆಸ್ರು ಬ್ಯಾಕು ಹೇಳು...'

'ಪಾಪು...'

'ಅಲ್ಲ ಬಂಗಾರಾ... 'ಪಾಪು' ಹೆಸ್ರ ಆಗಾ ಹಂಗಿಲ್ಲ... ಬ್ಯಾರೇನೇ ಇಡಬ್ಯಾಕು.' ಎಂದು ಗಂಗೆ ತನ್ನ ಮನಸ್ಸಿನಲ್ಲೇ ಹತ್ತಾರು ಹೆಸರುಗಳನ್ನು ತಂದುಕೊಂಡಳು... ತನ್ನ ಗೊಂಬೆಯಂತಹ ಮಗಳಿಗೆ ಯಾವ ಹೆಸರು ಇಟ್ಟರೆ ಒಪ್ಪವಾಗತ್ತೆ...? ಮೈಸೂರು ಪಟ್ಟಣದಾಗ ಯಾವುದ್ಯಾವ್ದೊ ಹೆಸ್ರು ಇಡ್ತಾರೆ... ಆದ್ರ ಅದು ದೇವ್ರ ಹೆಸರಲ್ಲ... ದೇವರ ಹೆಸರು ಯಾವುದು ಇರ್‍ಲಿ? ಅದೆಲ್ಲಾ ಹಳದಾಯ್ತು. ಅವಳು ಈ ಚೀಟಿಗೆ ಸುನಂದ ಬನ್ನಪ್ಪ ಮನೆಗೆ ಹೋದಾಗ ಅವರ ಮನೆಯಲ್ಲಿ ಒಂದು ಸುಂದರವಾದ ಹೆಣ್ಣಿನ ಫೋಟೋ ನೋಡಿದ್ದಳು. ಅಷ್ಟಿಗೆ ಕುತೂಹಲವಾಯ್ತು ಸುನಂದ ಅವ್ರನ್ನ ಕೇಳಿಯೇಬಿಟ್ಟಳು.

'ಈ ತಸ್ವೀರ ಛಲೊ ಐತ್ರಿ... ಯಾರವ್ವಾ ಈಕಿ...? ನಿಮ್ಮ ತಂಗಿನಾ...?' ಆಕೆ ಅಂದಿದ್ದರು. 'ಇವು ಎಲ್ಲರಿಗೂ ಸೋದರಿ... ನಮ್ಮ ಕಾಂಗ್ರೆಸ್ ಮಂದಿಗೆಲ್ಲಾ ಯಾಕೆ ನಮ್ಮ ದೇಶಕ್ಕೇ ದೇವತೆ ಹಾಗೆ...' ಮುಗ್ಧ ಗಂಗೆ ಸದಾಕಾಲ ಈ 'ದೇವತೆ' ಹೆಸರು ಕೇಳಿಸಿಕೊಳ್ಳುತ್ತಿದ್ದಳು.

ಈಗ ಆ ಫೋಟೋದ ಹೆಸರು ನೆನಪಾಯಿತು. ಅದನ್ನೇ ಇಡುವುದೇ ಸೂಕ್ತ ಎಂದುಕೊಂಡಿತು, ಮುಗ್ಧವಾದ ಆ ಮನಸ್ಸು, ಅದು 'ಇಂದಿರಾ ಗಾಂಧಿ'!

'ನಿನ್ನ ಹೆಸ್ರು ನಾ ಆರಿಸ್ದಿ ನೋಡವ್ವ... ಭಾಳಾ ಛಂದದೆ ಆಕಿ... ಬಡವರಿಗೆ ಸಹಾಯ ಮಾಡ್ತಾ ಇದ್ದಂತ... ದೇವ್ರಂತ ಹೆಸರು...'

'ದೇವರ...? ನನ್ನ ತಂದಿ ಹಾಂಗ... ಏನದು ಹೆಸ್ರು...?'

'ನಿನ್ನ ಹೆಸ್ರು 'ಇಂದ್ರಾ ಗಾಂಧಿ' ಅಂತಿರ್‍ಲವ್ವ. ಆಕೀ ಪ್ರಸಿದ್ಧ... ಆಕಿ ತಸ್ವೀರ ನೋಡೇನಿ... ಊರ ಮಂದಿಗೆಲ್ಲಾ ಆ ಹೆಸ್ರು ತಿಳದದೆ...! ಸುನಂದವ್ವ ಒಮ್ಮೆ ಹೇಳದ್ರು..'

ಪಾಪು ಕಣ್ಣು ಎಲ್ಲೋ ನೋಡುತ್ತಿತ್ತು. ಗಮನ ಮತ್ತೆಲ್ಲೊ ಪಯಣಿಸಿತ್ತು! ಗಂಗೆ ತನ್ನ ಪಾಡಿಗೆ ಮಾತಾಡುತ್ತಲೇ ಇದ್ದಳು.

'ನೀನು... ಇಂದ್ರಾ ಗಾಂಧೀ...' ಯಾರಾದ್ರೂ ನಿನ್ನ ಹೆಸರೇನವ್ವಾ ಅಂದ್ರೆ 'ಪಾಪು' ಅನ್ನಬಾರ್ದು ಇಂದ್ರಾ ಗಾಂಧೀ ಅನ್ಬೇಕು... ಈಗ ಹೇಳಲ್ವಾ ನಿನ್ನ ಹೆಸರೇನ?'

'ಪಾಪು.'

'ಅಲ್ಲ... ನಿನ್ನ ಹೆಸರು ಇಂದ್ರಾ ಗಾಂಧೀ.'

'ಇಂಚಿ ಪುಂಚಿ...' ಎಂದು ಜೋರಾಗಿ ನಗುತ್ತಾ ಚಪ್ಪಾಳೆ ಕುಟ್ಟಿತು ಕೂಸು.

'ಹಂಗೆ... ಮಳ್ಳು ಹಿಡಿದ್ದಾಂಗೆ ಏನೊ ಮಾತಾಡಬಾರ್ದು... ನೀನು ಇಂದ್ರ ಗಾಂಧೀ... ಈಗ ಹೇಳು... ನಿನ್ನ ಹೆಸರು ಯಾನಾ?...'

'ಪಾಸ ಪೂಸ'

'ಅಲ್ಲ... ಅದಲ್ಲ ಅಂತ ಆಗ್ಲೇ ಹೇಳದ್ನಲ್ಲವ್ವಾ... ನಿನ್ನ ಹೆಸ್ರು ಇಂದ್ರಾ ಗಾಂಧಿ.'

'ನಿನ್ನ ಹೆಸ್ರು ಇಂದ್ರಾ ಗಾಂಧಿ.'